ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	773
ಸದಸ್ಯರ ಹೆಸರು	:	ಶ್ರೀ ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ	:	10-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಗುಬ್ಬಿ ಪಟ್ಟಣ ಪಂಚಾಯಿತಿ ಯಾವ ದಿನಾಂಕದಿಂದ ಅಸ್ತಿತ್ವಕ್ಕೆ ಬಂದಿದೆ; ವಾರ್ಡ್‌ಗಳ ಸಂಖ್ಯೆ ಎಷ್ಟು; ಅವು ಯಾವುವು; ಪಂಚಾಯಿತಿ ಸರಹದ್ದು ಎಲ್ಲಿಯವರೆಗೆ ಇದೆ; (ವಿವರವಾದ ಮಾಹಿತಿ ನೀಡುವುದು)	ಅಧಿಸೂಚನೆ ಸಂಖ್ಯೆ ವನಇ 641 ಎಂಎಲ್‌ಆರ್ 95(13), ದಿನಾಂಕ 12.01.1996ರನ್ವಯ ಗುಬ್ಬಿ ಪಟ್ಟಣ ಪಂಚಾಯತಿಯು ಅಸ್ಥಿತ್ವಕ್ಕೆ ಬಂದಿರುತ್ತದೆ. ಸದರಿ ಅಧಿಸೂಚನೆಯಲ್ಲಿ ಗುಬ್ಬಿ ಪಟ್ಟಣ ಪಂಚಾಯತಿಯ ಸರಹದ್ದನ್ನು ಗುಬ್ಬಿ ಮಧ್ಯಂತರ ಮಂಡಲ ಪಂಚಾಯ್ತಿಯ ಹಾಲಿ ಪ್ರದೇಶ ಎಂದು ನಿಗದಿಪಡಿಸಲಾಗಿದೆ. ಗುಬ್ಬಿ ಪಟ್ಟಣ ಪಂಚಾಯತಿಯಲ್ಲಿ ಒಟ್ಟು 19 ವಾರ್ಡುಗಳು ಇರುತ್ತವೆ.
(ಆ)	ಸದರಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮಾರನಕಟ್ಟೆಯು ಇದೆಯೇ; ಹಾಗಾದಲ್ಲಿ, ಇದರ ವಿಸ್ತೀರ್ಣ ಎಷ್ಟು; ಮಾರನಕಟ್ಟೆಯ ಮಾಲೀಕರು ಯಾರು; (ವಿವರವಾದ ಮಾಹಿತಿ ನೀಡುವುದು)	ಗುಬ್ಬಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮಾರನಕಟ್ಟೆಯು ಇದೆ. ಇದರ ವಿಸ್ತೀರ್ಣ 46.00 ಎಕರೆ ಆಗಿರುತ್ತದೆ. ಗುಬ್ಬಿ ಪಟ್ಟಣ ಪಂಚಾಯತಿಯ ಮಾಲೀಕತ್ವದಲ್ಲಿ ಮಾರನಕಟ್ಟೆಯು ಇರುತ್ತದೆ.
(ಇ)	ಮಾರನಕಟ್ಟೆಯ ಜಾಗದಲ್ಲಿ ಇಲ್ಲಿಯವರೆಗೆ ಯಾವ ಯಾವ ಇಲಾಖೆಗಳು ಹಾಗೂ ಸಂಘ-ಸಂಸ್ಥೆಗಳಿಗೆ ಜಮೀನನ್ನು ಮಂಜೂರು ಮಾಡಲಾಗಿದೆ; ಹಾಲಿ ಖಾಲಿಯಿರುವುದು ಎಷ್ಟು; (ವಿವರವಾದ ಮಾಹಿತಿ ನೀಡುವುದು)	ಮಾರನಕಟ್ಟೆಯ ಜಾಗದಲ್ಲಿ ಈ ಕೆಳಕಂಡ ಇಲಾಖೆಗಳು ಹಾಗೂ ಸಂಘಸಂಸ್ಥೆಗಳಿಗೆ ಜಮೀನನ್ನು ನೀಡಲಾಗಿರುತ್ತದೆ. 1) ಸಮಾಜ ಕಲ್ಯಾಣ ಇಲಾಖೆ(ಪರಿಶಿಷ್ಟ ಜಾತಿಯ ಬಾಲಕಿಯರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ). 2) ನೀರಾವರಿ ಇಲಾಖೆ (ಹೇಮಾವತಿ ಕಛೇರಿ). 3) ನ್ಯಾಯಾಧೀಶರ ವಸತಿಗೃಹ. 4) ಅರಣ್ಯ ಇಲಾಖೆ ಕಛೇರಿ. 5) ಒಕ್ಕಲಿಗರ ಸಮುದಾಯ ಭವನ. 6) ಸಾರ್ವಜನಿಕ ಶಿಕ್ಷಣ ಇಲಾಖೆ(ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ). 7) ವೀರಶೈವ ಸಮಾಜ. 8) ಕೃಷಿ ಇಲಾಖೆ ಕಛೇರಿ. 9) ನಿವೃತ್ತ ನೌಕರರ ಸಂಘ ಕಟ್ಟಡ. 10) ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ. 11) ಚನ್ನಬಸವೇಶ್ವರ ಕೃಪಾ ಪೋಷಕ ನಾಟಕ ಮಂಡಳಿ ಕಟ್ಟಡ. 12)ವೈಷ್ಣವ ಸಮಾಜ ಹಾಲಿ ಸುಮಾರು 25 ಎಕರೆ ಖಾಲಿ ಜಾಗ ಇರುತ್ತದೆ.

(ಈ)	ಗುಬ್ಬಿ ಸರ್ಕಾರಿ ಬಸ್ ನಿಲ್ದಾಣದಿಂದ ಮಾರುಕಟ್ಟೆ ಪಕ್ಕದಲ್ಲಿ ಉತ್ತಮ ರಸ್ತೆ ನಿರ್ಮಿಸಲು ಪಟ್ಟಣ ಪಂಚಾಯಿತಿಯ ಸಿ.ಡಿ.ಪಿ.ಯಲ್ಲಿ ಸೇರಿಸಲಾಗಿದೆಯೇ? (ವಿವರವಾದ ಮಾಹಿತಿ ನೀಡುವುದು)	ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗಿರುವುದಿಲ್ಲವಾದ್ದರಿಂದ ಸಿ.ಡಿ.ಪಿ.ಯನ್ನು ತಯಾರಿಸಿರುವುದಿಲ್ಲ.

ಸಂಖ್ಯೆ: ನಅಇ 09 ಎಲ್‌ಸಿಕ್ಯೂ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ
ರೇಷ್ಮೆ ಸಚಿವರು